National

Kannada

23.09.2025: 19.35hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಎಪ್ಪತ್ತೇಳನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ; ಖ್ಯಾತ ನಟ ಮೋಹನ್ ಲಾಲ್‌ಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನ

೨. ದೀಪಾವಳಿ, ಛತ್ ಹಬ್ಬಗಳ ಸಂದರ್ಭದಲ್ಲಿ ಹನ್ನೆರಡು ಸಾವಿರ ವಿಶೇಷ ರೈಲುಗಳ ಸಂಚಾರ

೩. ನವದೆಹಲಿಯಲ್ಲಿಂದು 'ವಿಕಸಿತ ಭಾರತ್ ಬಿಲ್ಡಥಾನ್ ೨೦೨೫' ಉದ್ಘಾಟಿಸಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್

೪. ಏಷ್ಯಾ ಕಪ್ ಟಿ-೨೦ ಕ್ರಿಕೆಟ್: ಸೂಪರ್ ಫೋರ್ ಹಂತದ ಪಂದ್ಯದಲ್ಲಿಂದು ಶ್ರೀಲಂಕಾ-ಪಾಕಿಸ್ತಾನ ಮುಖಾಮುಖಿ

><><><><><

ನವದೆಹಲಿಯಲ್ಲಿ ಇಂದು ನಡೆದ ೭೧ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ವಿಜೇತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಖ್ಯಾತ ನಟ, ನಿರ್ದೇಶಕ ಮತ್ತು ನಿರ್ಮಾಪಕ ಮೋಹನ್ ಲಾಲ್ ಅವರಿಗೆ ೨೦೨೩ ರ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯನ್ನು ರಾಷ್ಟ್ರಪತಿಗಳು ಪ್ರದಾನ ಮಾಡಿದರು. ಅತ್ಯುತ್ತಮ ಚಲನಚಿತ್ರ ಪ್ರಶಸ್ತಿಯನ್ನು ಹಿಂದಿ ಚಿತ್ರ '೧೨ತ್ ಫೇಲ್' ಹಾಗೂ ಅತ್ಯುತ್ತಮ ಹಿಂದಿ ಚಲನಚಿತ್ರ ಪ್ರಶಸ್ತಿಯನ್ನು 'ಕಥಲ್: ಎ ಜಾಕ್‌ಫ್ರೂಟ್ ಮಿಸ್ಟರಿ'ಗೆ ನೀಡಲಾಯಿತು. ಅತ್ಯುತ್ತಮ ನಟ ಪ್ರಶಸ್ತಿಯನ್ನು ಶಾರುಖ್ ಖಾನ್ ಮತ್ತು ವಿಕ್ರಾಂತ್ ಮಾಸ್ಸಿ ಅವರಿಗೆ ಪ್ರದಾನ ಮಾಡಲಾಯಿತು. ಅತ್ಯುತ್ತಮ ನಟಿ ಪ್ರಶಸ್ತಿಯನ್ನು ನಟಿ ರಾಣಿ ಮುಖರ್ಜಿ ಪಡೆದಿದ್ದಾರೆ. ಸೌಮ್ಯಜಿತ್ ಘೋಷ್ ದಸ್ತಿದಾರ್ ನಿರ್ದೇಶನದ ಫ್ಲವರ್ ಮ್ಯಾನ್ ಚಿತ್ರವು ಅತ್ಯುತ್ತಮ ನಾನ್-ಫೀಚರ್ ಫಿಲ್ಮ್ ಪ್ರಶಸ್ತಿಯನ್ನು ಪಡೆದುಕೊಂಡಿದೆ. ಪಿಯೂಷ್ ಠಾಕೂರ್ ಅತ್ಯುತ್ತಮ ನಿರ್ದೇಶಕ ಪ್ರಶಸ್ತಿಯನ್ನು ಪಡೆದಿದ್ದಾರೆ. ಸಾಕ್ಷ್ಯ ಚಿತ್ರ ವಿಭಾಗದಲ್ಲಿ ಕನ್ನಡದ ಕಂದೀಲು ಹಾಗೂ ಕಿರುಚಿತ್ರ ಅತ್ಯುತ್ತಮ ಕಥೆ ವಿಭಾಗದಲ್ಲಿ ಮೈಸೂರಿನ ಡಾ.ಚಿದಾನಂದ ಎಸ್.ನಾಯಕ್ ನಿರ್ದೇಶನದ 'ಸನ್ ಫ್ಲವರ್ಸ್'ಗೆ ಪ್ರಶಸ್ತಿ ಲಭಿಸಿದೆ.

><><><><><

ಪ್ರಯಾಣಿಕರ ಅನುಕೂಲಕ್ಕಾಗಿ ದೀಪಾವಳಿ ಮತ್ತು ಛತ್ ಹಬ್ಬಗಳ ಸಂದರ್ಭದಲ್ಲಿ ಹನ್ನೆರಡು ಸಾವಿರ ವಿಶೇಷ ರೈಲುಗಳು ಸಂಚರಿಸಲಿವೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಘೋಷಿಸಿದ್ದಾರೆ. ನವದೆಹಲಿಯಲ್ಲಿ ಇಂದು ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಈ ವಿಶೇಷ ರೈಲುಗಳು ಅಕ್ಟೋಬರ್ ೧ ರಿಂದ ನವೆಂಬರ್ ೧೫ ರವರೆಗೆ ಸಂಚರಿಸಲಿವೆ ಎಂದು ತಿಳಿಸಿದರು. ಕಳೆದ ವರ್ಷ ದೀಪಾವಳಿ ಮತ್ತು ಛತ್ ಹಬ್ಬಗಳ ಸಂದರ್ಭದಲ್ಲಿ ಏಳು ಸಾವಿರದ ೭೫೦ ವಿಶೇಷ ರೈಲುಗಳನ್ನು ಓಡಿಸಲಾಗಿತ್ತು ಎಂದು ಅವರು ಮಾಹಿತಿ ನೀಡಿದರು. ರೈಲ್ವೆಯ ೨೯ ವಿಭಾಗಗಳು ರೈಲು

ಕಾರ್ಯಾಚರಣೆಯಲ್ಲಿ ಶೇಕಡಾ ೯೫ ರಷ್ಟು ಸಮಯಪಾಲನೆ ಸಾಧಿಸಿವೆ. ಈ ವಿಭಾಗಗಳಲ್ಲಿ ಮೈಸೂರು, ಮಾಲ್ಡಾ, ನಾಗ್ಪುರ, ಕೋಟಾ, ರಾಂಚಿ, ಜೈಪುರ, ರಾಜ್‌ಕೋಟ್, ಬಿಕಾನೇರ್ ಮತ್ತು ಅಹಮದಾಬಾದ್ ಸೇರಿವೆ. ಎಲ್ಲಾ ೭೦ ವಿಭಾಗಗಳಲ್ಲಿ ೧೦೦ ಪ್ರತಿಶತ ಸಮಯಪಾಲನೆ ಸಾಧಿಸಲು ರೈಲ್ವೆ ಸಚಿವಾಲಯ ಶ್ರಮಿಸುತ್ತಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

><><><><><

ನವದೆಹಲಿಯಲ್ಲಿ ಇಂದು 'ವಿಕಸಿತ ಭಾರತ್ ಬಿಲ್ಡ್‌ಥಾನ್ ೨೦೨೫' ಅನ್ನು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಉದ್ಘಾಟಿಸಿದರು. ಈ ಉಪಕ್ರಮವು ಯುವಕರಲ್ಲಿ ಸೃಜನಶೀಲತೆ, ಸಮಸ್ಯೆ ಪರಿಹಾರ ಮತ್ತು ಸ್ವಾವಲಂಬನೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಶಿಕ್ಷಣ ಸಚಿವಾಲಯದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ನೀತಿ ಆಯೋಗದ 'ಅಟಲ್ ಇನ್ನೋವೇಶನ್ ಮಿಷನ್' ಸಹಯೋಗದೊಂದಿಗೆ ಈ ವರ್ಷ ಅಕ್ಟೋಬರ್ ೧೩ ರಂದು ವಿಕಸಿತ ಭಾರತ್ ಬಿಲ್ಡ್‌ಥಾನ್ ೨೦೨೫ ಅನ್ನು ಆಯೋಜಿಸುತ್ತಿದೆ.  ಇದು ಆತ್ಮನಿರ್ಭರ್ ಭಾರತ್, ಸ್ವದೇಶಿ ಮತ್ತು ಸಮೃದ್ಧ್ ಭಾರತ್ ವಿಷಯಗಳ ಕುರಿತು ಮೂಲಮಾದರಿಗಳನ್ನು ರೂಪಿಸಲು, ವಿನ್ಯಾಸಗೊಳಿಸಲು ಮತ್ತು ನಿರ್ಮಿಸಲು ಯುವ ಮನಸ್ಸುಗಳನ್ನು ಪ್ರೇರೇಪಿಸುತ್ತದೆ. ವಿದ್ಯಾರ್ಥಿಗಳು ಇಂದಿನಿಂದ ಅಕ್ಟೋಬರ್ ೬ ರವರೆಗೆ ಬಿಲ್ಡ್‌ಥಾನ್‌ಗೆ ನೋಂದಾಯಿಸಿಕೊಳ್ಳಬಹುದು. ಈ ರಾಷ್ಟ್ರವ್ಯಾಪಿ ಆಂದೋಲನವು ದೇಶಾದ್ಯಂತ ಆರು ಲಕ್ಷ ಶಾಲೆಗಳಿಂದ ೧೨ ಕೋಟಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ನಿರೀಕ್ಷೆಯಿದೆ. ಈ ಸಂದರ್ಭದಲ್ಲಿ ಮಾತನಾಡಿದ ಸಚಿವ ಧರ್ಮೇಂದ್ರ ಪ್ರಧಾನ್, ಕಳೆದ ಹನ್ನೊಂದು ವರ್ಷಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ನಾವೀನ್ಯತೆಗೆ ಆದ್ಯತೆ ನೀಡಿದ್ದಾರೆ. ಶಾಲಾ ವಿದ್ಯಾರ್ಥಿಗಳಲ್ಲಿ ನಾವೀನ್ಯತೆಯನ್ನು ಉತ್ತೇಜಿಸಲು ಸರ್ಕಾರ, 'ಅಟಲ್ ಇನ್ನೋವೇಶನ್ ಮಿಷನ್' ಸಹ ಪ್ರಾರಂಭಿಸಿದೆ. ದೇಶದಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ಅಟಲ್ ಟಿಂಕರಿಂಗ್ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

><><><><><

ದೇಶಾದ್ಯಂತ ಇಂದು ೧೦ನೇ ರಾಷ್ಟ್ರೀಯ ಆಯುರ್ವೇದ ದಿನವನ್ನು ಆಚರಿಸಲಾಯಿತು.  ಗೋವಾದ ಧಾರ್‌ಗಳ್ ಕ್ಯಾಂಪಸ್‌ನಲ್ಲಿಂದು ಅಖಿಲ ಭಾರತೀಯ ಆಯುರ್ವೇದ ಸಂಸ್ಥೆ ವತಿಯಿಂದ ರಾಷ್ಟ್ರೀಯ ಆಯುರ್ವೇದ ದಿನವನ್ನು ಆಚರಿಸಲಾಯಿತು. ಗೋವಾ ರಾಜ್ಯಪಾಲ ಅಶೋಕ್ ಗಜಪತಿ ರಾಜು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೋವಾ ಮುಖ್ಯಮಂತ್ರಿ ಡಾ. ಪ್ರಮೋದ್ ಸಾವಂತ್, ಕೇಂದ್ರ ಆಯುಷ್ ಮತ್ತು ಆರೋಗ್ಯ ಖಾತೆ ರಾಜ್ಯ ಸಚಿವ ಪ್ರತಾಪ್ ರಾವ್ ಜಾಧವ್, ಕೇಂದ್ರ ನವ ಮತ್ತು ನವೀಕರಿಸಬಹುದಾದ ಇಂಧನ ಖಾತೆ ರಾಜ್ಯ ಸಚಿವ ಶ್ರೀಪಾದ್ ನಾಯ್ಕ್ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ, ಆಯುರ್ವೇದದ ಮಹತ್ವ ಹಾಗೂ ಜನರು ಮತ್ತು ಭೂಮಿಗೆ ಆಯುರ್ವೇದದ ಕೊಡುಗೆಯನ್ನು ಪ್ರಸ್ತುತಪಡಿಸಲಾಯಿತು. ಈ ಸಂದರ್ಭದಲ್ಲಿ ಕ್ಯಾನ್ಸರ್ ಚಿಕಿತ್ಸೆಗೆ ಸಮಗ್ರ ಅಂಕಾಲಾಜಿ ಘಟಕ, ದೇಶ್ ಕಾ ಆರೋಗ್ಯ ಪರೀಕ್ಷಣ ಅಭಿಯಾನ, ಆಪ್ತಾ ಆಪ್, ದ್ರವ್ಯ ವೆಬ್‌ಪೋರ್ಟಲ್‌ಗೆ ಚಾಲನೆ ನೀಡಲಾಯಿತು.

><><><><><

ಸೇವೆ ಮತ್ತು ಸುಶಾಸನ ಮಂತ್ರದಿಂದ, ಅಂದರೆ ಸಾರ್ವಜನಿಕ ಸೇವೆ ಮತ್ತು ಉತ್ತಮ ಆಡಳಿತದಿಂದ ಮಾರ್ಗದರ್ಶಿಸಲ್ಪಟ್ಟ ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಸರ್ಕಾರ, ಪರಿವರ್ತನೆ ಮತ್ತು ಪ್ರಗತಿಯನ್ನು ತರಲು ಅವಿಶ್ರಾಂತವಾಗಿ ಶ್ರಮಿಸುತ್ತಿದೆ. ಇಂದು, ಈ ವಿಶೇಷ ಸರಣಿ - ’ಸೇವಾ ಪರ್ವ’ದಲ್ಲಿ, ಕೇಂದ್ರ ಸರ್ಕಾರ, ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆಯ ಮೂಲಕ ಭಾರತದ ಯುವಕರನ್ನು ಹೇಗೆ ಸಬಲೀಕರಣಗೊಳಿಸಿದೆ ಎಂಬುದರ ಕುರಿತು ವಿಶೇಷ ವರದಿ ಇದೀಗ ಮೂಡಿಬರಲಿದೆ.

><><><><><

ದೇಶದ ಲಕ್ಷಾಂತರ ಯುವಕರ ಸಬಲೀಕರಣಕ್ಕಾಗಿ ೨೦೧೫ ರ ಜುಲೈ ೧೫ ರಂದು ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಯೋಜನೆಯು ಈಗ ಒಂದು ದಶಕ ಪೂರ್ಣಗೊಳಿಸಿದೆ. ಈ ಯೋಜನೆಯಡಿಯಲ್ಲಿ, ಈ ವರ್ಷದ ಜುಲೈ ವರೆಗೆ ಸುಮಾರು ಒಂದು ಕೋಟಿ ೬೩ ಲಕ್ಷ ಯುವಕರಿಗೆ ತರಬೇತಿ ನೀಡಲಾಗಿದೆ. ಅದರಲ್ಲಿ ಶೇಕಡಾ ೪೫ ರಷ್ಟು ಮಹಿಳೆಯರು ಸೇರಿದ್ದಾರೆ. ಯೋಜನೆಯ ನಾಲ್ಕನೇ ಹಂತ ಈಗಾಗಲೇ ಪ್ರಾರಂಭವಾಗಿದೆ. ಇದು ಮುಂದಿನ ವರ್ಷದವರೆಗೆ ಮುಂದುವರಿಯುತ್ತದೆ. ಈ ಯೋಜನೆಯಡಿಯಲ್ಲಿ, ತರಬೇತಿ ಪಡೆದ ಯುವಕರು ತಮ್ಮ ಆದ್ಯತೆಯ ವೃತ್ತಿಯನ್ನು ಆಯ್ಕೆ ಮಾಡಲು ಪ್ರೋತ್ಸಾಹಿಸುವುದಲ್ಲದೆ, ತಮ್ಮದೇ ಆದ ವ್ಯವಹಾರಗಳನ್ನು ಪ್ರಾರಂಭಿಸಲು ಸಹ ಬೆಂಬಲ ನೀಡಲಾಗುತ್ತಿದೆ. ಅಂತಹ ಒಬ್ಬ ಫಲಾನುಭವಿ, ರಾಜಸ್ಥಾನದ ಉದಯಪುರದ ಉಮೇಶ್ ಕುಮಾರ್ ಮಾತನಾಡಿ, ಸ್ಕಿಲ್ ಇಂಡಿಯಾ ಮಿಷನ್ ಯುವಕರನ್ನು ಸಬಲೀಕರಣಗೊಳಿಸುವುದಲ್ಲದೆ, ಜಾಗತಿಕ ವೇದಿಕೆಯಲ್ಲಿ ಅವರಿಗೆ ಮನ್ನಣೆಯನ್ನು ನೀಡುತ್ತಿದೆ. ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಮತ್ತು ನಾಯಕತ್ವದಿಂದ ನಡೆಸಲ್ಪಟ್ಟ ಸ್ಕಿಲ್ ಇಂಡಿಯಾ ಮಿಷನ್, ಇಂದು ನವ ಭಾರತದ ಪ್ರವರ್ತಕವಾಗಿ ಹೊರಹೊಮ್ಮಿದೆ ಎಂದು ಹೇಳಿದ್ದಾರೆ.

><><><><><

ಆಯುಷ್ಮಾನ್ ಭಾರತ್ - ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆಯು ಇಂದಿಗೆ ಏಳು ವರ್ಷಗಳನ್ನು ಪೂರೈಸಿದೆ. ೨೦೧೮ ರ ಸೆಪ್ಟೆಂಬರ್‌ನಲ್ಲಿ ಜಾರ್ಖಂಡ್‌ನ ರಾಂಚಿಯಲ್ಲಿ ಪ್ರಾರಂಭವಾದ ಈ ಯೋಜನೆಯು ವಿಶ್ವದ ಅತಿದೊಡ್ಡ ಸರ್ಕಾರಿ ಅನುದಾನಿತ ಆರೋಗ್ಯ ಭರವಸೆ ಯೋಜನೆಯಾಗಿದೆ. ಈ ಯೋಜನೆಯು ಭಾರತದಲ್ಲಿ ಸಾರ್ವಜನಿಕ ಆರೋಗ್ಯ ಸೇವೆಯನ್ನು ಪರಿವರ್ತಿಸಿದೆ. ಆಯುಷ್ಮಾನ್ ಭಾರತ್ ನಿಂದಾಗಿ ದೇಶವು ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ ಕ್ರಾಂತಿಯನ್ನು ಕಾಣುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಹೇಳಿದ್ದಾರೆ.

><><><><><

ನವದೆಹಲಿಯ ಭಾರತ್ ಮಂಟಪಂನಲ್ಲಿ ಇದೇ ಗುರುವಾರ ನಾಲ್ಕು ದಿನಗಳ ವರ್ಲ್ಡ್ ಫುಡ್ ಇಂಡಿಯಾವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ವರ್ಲ್ಡ್ ಫುಡ್ ಇಂಡಿಯಾದ ೪ನೇ ಆವೃತ್ತಿಯು ವೈವಿಧ್ಯಮಯ ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ಹೂಡಿಕೆಗಳನ್ನು ಉತ್ತೇಜಿಸುವ ಜೊತೆಗೆ ಭಾರತದ ಶ್ರೀಮಂತ ಆಹಾರ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುವ ಗುರಿಯನ್ನು ಹೊಂದಿದೆ.

><><><><><

ಪಶ್ಚಿಮ ಬಂಗಾಳದಲ್ಲಿ, ಕೋಲ್ಕತ್ತಾ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿನ್ನೆ ರಾತ್ರಿಯಿಡೀ ಸುರಿದ ಮಳೆಯ ನಂತರ ತೀವ್ರ ಜಲಾವೃತವಾಗಿದ್ದು, ವಿದ್ಯುತ್ ಸ್ಪರ್ಶದಿಂದ ಒಂಬತ್ತು ಜನರು ಸಾವನ್ನಪ್ಪಿದ್ದಾರೆ. ತೀವ್ರ ಮಳೆಯಿಂದಾಗಿ ಮೆಟ್ರೋ ರೈಲು ಹಾಗೂ ಅನೇಕ ಎಕ್ಸ್‌ಪ್ರೆಸ್ ಮತ್ತು ಪ್ಯಾಸೆಂಜರ್ ರೈಲುಗಳ ಸಂಚಾರಕ್ಕೆ ಅಡ್ಡಿಯಾಗಿದೆ. ಪಶ್ಚಿಮ ಬಂಗಾಳ ಸರ್ಕಾರ, ಗುಡ್ಡಗಾಡು ಪ್ರದೇಶಗಳನ್ನು ಹೊರತುಪಡಿಸಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ನಾಳೆಯಿಂದ ಎರಡು ದಿನಗಳ ರಜೆ ಘೋಷಿಸಿದೆ.

**><><><><><**

ಅಬುಧಾಬಿಯ ಶೇಖ್ ಜಯೇದ್ ಕ್ರೀಡಾಂಗಣದಲ್ಲಿ ಇಂದು ನಡೆಯುವ ಏಷ್ಯಾ ಕಪ್ ಟಿ-೨೦ ಕ್ರಿಕೆಟ್‌ನ ಸೂಪರ್ ಫೋರ್ ಹಂತದ ಪಂದ್ಯದಲ್ಲಿ ಶ್ರೀಲಂಕಾ ಮತ್ತು ಪಾಕಿಸ್ತಾನ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೮ ಗಂಟೆಗೆ ಆರಂಭವಾಗಲಿದೆ.

**><><><END><><><**